ದಿನಾಂಕಃ 10.11.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿಯ ಪರ ವಕೀಲರಿಂದಃ

ನಾನು ಈಗ ಹೊನಕೊಪ್ಪಿಯಲ್ಲಿ ವಾಸವಿರುತ್ತೇನೆ. ನನ್ನ ಮತ್ತು ಪ್ರತಿವಾದಿಯ ಊರು ಕೌಜಲಗಿ ಎರಡೂ ಅಕ್ಕಪಕ್ಕದಲ್ಲಿ ಇದ್ದು, ಅವರು ನನಗೆ ಪರಿಚಯವಿರುತ್ತಾರೆ. ಅವರು ನನಗೆ 20-25 ವರ್ಷಗಳಿಂದ ಪರಿಚಯವಿರುತ್ತಾರೆ. ಅವರಿಗೆ ಹೆಂಡತಿ, ತಾಯಿ ಮತ್ತು ಸಣ್ಣ ಮಕ್ಕಳು ಇದ್ದಾರೆ ಎಂದರೆ ಸರಿ. ಪ್ರತಿವಾದಿಯ ಪಾಲಿಗೆ 2 ಎಕರೆ 14 ಗುಂಟೆ ಜಮೀನು ಮತ್ತು 3 ಎಕರೆ 8 ಗುಂಟೆ ಜಮೀನು ಬಂದಿರುತ್ತದೆ. ದಾವಾ ಸ್ವತ್ತು ಬೀರಪ್ಪರವರ ಸ್ವಂತ ಆಸ್ತಿ ಇರುತ್ತದೆ. ಬೀರಪ್ಪವರಿಗೆ ಒಬ್ಬ ಮಗಳು, ಮಗ ಹಾಗೂ ಅವರಿಗೆ ಇಬ್ಬರು ಅಕ್ಕಂದಿರು ಮಾತ್ರ ಇದ್ದಾರೆ. ದಾವಾ ಸ್ವತ್ತಿನ ಕಬ್ಜೆಯಲ್ಲಿ ಅವರೇ ಇದ್ದಾರೆ. ಪ್ರತಿವಾದಿಯವರ ಜಮೀನು ಕೌಜಲಗಿಯ ಗ್ರಾಮದ ವ್ಯಾಪ್ತಿಯಲ್ಲಿ ಇದೆ. ಬೀರಪ್ಪರವರಿಗೆ ಬಸಪ್ಪ ಡೋಣಿ ಎಂಬ ಒಬ್ಬ ತಮ್ಮ ಇದ್ದಾರೆ ಎಂದರೆ ಸರಿ, ಅವರು ನನಗೆ ಪರಿಚಯವಿಲ್ಲ. ಸದಾಶಿವ ಲಗಳಿ ಎಂಬುರವರು ನನಗೆ ಪರಿಚಯವಿದ್ದಾರೆ. ಅವರಿಗೂ ನನಗೂ ಒಳ್ಳೆಯ ಗೆಳೆತನ ಇದೆ ಎಂದರೆ ಸರಿ. ಅವರ ವ್ಯವಹಾರದ ಕಾಗದ ಪತ್ರಗಳಿಗೆ ನಾನು ಸಾಕ್ಷಿಯಾಗಿ ಸಹಿ ಮಾಡಿಲ್ಲ, ನನ್ನ ವ್ಯವಹಾರದ ಕಾಗದಪತ್ರಗಳಿಗೆ ಅವರು ಸಾಕ್ಷಿಯಾಗಿ ಸಹಿ ಮಾಡಿದ್ದಾರೆ. ಬಡ್ಡಿಗೆ ಸಾಲ ನೀಡುವುದು, ಸಾಲದ ಭದ್ರತೆಗೆ ಕರಾರುಪತ್ರ ಬರೆಸಿಕೊಳ್ಳುವುದು, ದಾವೆ ದಾಖಲಿಸುವುದು ನನ್ನ ಕೆಲಸವಾಗಿದೆ ಎಂದರೆ ಸರಿಯಲ್ಲ.

2. ಬೀರಪ್ಪರವರು ಅವರ ಮನೆಯಲ್ಲಿಯೇ ನನಗೆ ದಾವಾ ಸ್ವತ್ತು ಮಾರಾಟ ಮಾಡುತ್ತೇನೆ ಎಂದು ಹೇಳಿದರು. ಆಗ ನನ್ನ ಜೊತೆಯಲ್ಲಿ ಲಗಳಿ ಸದಾಶಿವ ಮತ್ತು ಕೆ ಎಮ್ ಒಬ್ಬಿ ಇದ್ದರು. ಮಾತುಕತೆ ನೊಂದಣಿ ಮಾಡಲು ಬರುವ 4 ದಿವಸಗಳ ಮೊದಲು ಆಗಿರುತ್ತದೆ. ಬೀರಪ್ಪರವರು ಹೊಲ ಮಾರಲು ಬಂದಾಗ ಯಾರು ಹೊಲ ತೆಗೆದುಕೊಳ್ಳಲಿಲ್ಲ, ನಿಮ್ಮ ಬಳಿ ದುಡ್ಡು ಇದೆ ತೆಗೆದುಕೊಳ್ಳಿ ಎಂದು ನನಗೆ ಹೇಳಿದರು.

ಬೀರಪ್ಪರವರು 2 ಎಕರೆ 14 ಗುಂಟೆ ಜಮೀನನ್ನು ಮಾರುತ್ತೇನೆ ಎಂದು ಹೇಳಿದರು. ಅದರ ಸರ್ವೇ ನಂ.296 ಆಗಿರುತ್ತದೆ. ಮಾತುಕತೆಯಾದ ಸಮಯದಲ್ಲಿ ಅವರ ಬೀರಪ್ಪರವರ ಹೆಂಡತಿ, ಮಕ್ಕಳು ಮತ್ತು ಹಿರಿಯರು ಇದ್ದರು, ಅವರ ಅಕ್ಕತಂಗಿಯರು ಇರಲಿಲ್ಲ, ಮಕ್ಕಳು ಸಣ್ಣವರಿದ್ದರು. ಬೀರಪ್ಪ ಮತ್ತು ಹೆಂಡತಿ ಕೂಡಿ ಮಾರಾಟ ಮಾಡಲು ಒಪ್ಪಿದ್ದಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಕೆ ಎಮ್ ಶಂಕರ್)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ